ಪ್ರಜಾವಾಣಿ

## 10,500 ಮೆಗಾವಾಟ್ ವಿದ್ಯುತ್ ಉತ್ಪಾದನೆ: ಸಚಿವ ಡಿ.ಕೆ. ಶಿವಕುಮಾರ್

# ವಿದ್ಯುತ್ ಮಾರಾಟಕ್ಕೆ ಸಿದ್ಧ

ಪ್ರಜಾವಾಣಿ ವಾರ್ತೆ

ತುಮಕೂರು: 'ರಾಜ್ಯದಲ್ಲಿ 10,500 ಮೆಗಾವಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದ್ದು, 9,500 ಮೆಗಾವಾಟ್‌ಗಷ್ಟೆ ಬೇಡಿಕೆ ಇದೆ. ಯಾರಾದರೂ ವಿದ್ಯುತ್ ಖರೀದಿಗೆ ಮುಂದೆ ಬಂದರೆ ಮಾರಾಟ ಮಾಡಲು ಸರ್ಕಾರ ಸಿದ್ದವಿದೆ' ಎಂದು ಇಂಧನ ಸಚಿವ ಡಿ.ಕೆ. ಶಿವಕುಮಾರ್ ಹೇಳಿದರು.

ಬುಧವಾರ ಪಾವಗಡ ತಾಲ್ಲೂಕಿನ ತಿರುಮಣಿ ಸಮೀಪ ಸೌರ ವಿದ್ಯುತ್ ಪಾರ್ಕ್ ನಿರ್ಮಾಣ ಕಾಮಗಾರಿ ಪ್ರದೇಶಕ್ಕೆ ಭೇಟಿ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

'ಮುಂಬರುವ ದಿನಗಳಲ್ಲಿ ರಾಜ್ಯದಲ್ಲಿ ವಿದ್ಯುತ್ ಬೇಡಿಕೆ ಹೆಚ್ಚಾದರೂ ಅದನ್ನು ನಿಭಾಯಿಸಲು ಸರ್ಕಾರ ಎಲ್ಲ ಸಿದ್ಧತೆ ಮಾಡಿಕೊಂಡಿದೆ. ಬೇಸಿಗೆಯಲ್ಲಿ ಲೋಡ್ ಶೆಡ್ಡಿಂಗ್ ಮಾಡುವುದಿಲ್ಲ. ಸಮರ್ಥವಾಗಿ ನಿಭಾಯಿಸುವ ನಿಟ್ಟಿನಲ್ಲಿ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಿದೆ' ಎಂದು ತಿಳಿಸಿದರು.

**ಸೌರ ವಿದ್ಯುತ್ ಪಾರ್ಕ್:** 'ಸೌರ ವಿದ್ಯುತ್ ಪಾರ್ಕ್‌ಗೆ ಭೂ ಸ್ವಾಧೀನ ಮಾಡಿಕೊಳ್ಳದೇ 13 ಸಾವಿರ ಎಕರೆ ಪ್ರದೇಶವನ್ನು ರೈತರ ಮನವೊಲಿಸಿ ಪಡೆದಿರುವುದಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರೇ ಅಚ್ಚರಿ ವ್ಯಕ್ತಪಡಿಸಿದ್ದಾರೆ' ಎಂದು ಹೇಳಿದರು.



**2018ರ ವೇಳೆಗೆ ಸೌರ ವಿದ್ಯುತ್ ಪಾರ್ಕ್ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಿ ವಿದ್ಯುತ್ ಪೂರೈಸುತ್ತೇವೆ.**
**ಡಿ.ಕೆ.ಶಿವಕುಮಾರ್,** ಇಂಧನ ಸಚಿವ

'ಭೂಮಿ ನೀಡಿರುವ ರೈತರಿಗೆ ಪ್ರತಿ ವರ್ಷ ಪ್ರತಿ ಎಕರೆಗೆ ₹ 21 ಸಾವಿರ ನೀಡಲಾಗುವುದು. ಎರಡು ವರ್ಷಕ್ಕೊಮ್ಮೆ ಮೂಲ ದರದಲ್ಲಿ ಶೇ 5 ರಷ್ಟು ಹೆಚ್ಚಳ ಮಾಡಲಾಗುವುದು. 54 ವರ್ಷಗಳಿಂದ ಸತತ ಬರಗಾಲಕ್ಕೆ ತುತ್ತಾದ ಈ ಪ್ರದೇಶದ ರೈತರಿಗೆ ಈ ಯೋಜನೆಯು ಆರ್ಥಿಕ ಚೇತರಿಕೆಯಾಗಿದೆ' ಎಂದು ವಿವರಿಸಿದರು.

'ಸರ್ಕಾರ ಮತ್ತು ಖಾಸಗಿ ಕಂಪೆನಿಗಳು ಸೇರಿ ₹ 15 ಸಾವಿರ ಕೋಟಿ ವೆಚ್ಚದಲ್ಲಿ ಈ ಯೋಜನೆ ಕೈಗೊಳ್ಳಲಾಗಿದೆ. ಒಟ್ಟು 2700 ಮೆಗಾವಾಟ್ ವಿದ್ಯುತ್ ಉತ್ಪಾದನೆ ಮಾಡುವ ಗುರಿ ಇದೆ. ಇದರಲ್ಲಿ 2000 ಮೆಗಾವಾಟ್ ಸರ್ಕಾರ ಮತ್ತು 700 ಮೆಗಾವಾಟ್ ಖಾಸಗಿ ವಿದ್ಯುತ್ ಕಂಪೆನಿಗಳು ಉತ್ಪಾದನೆ ಮಾಡಲಿವೆ. ಪರೋಕ್ಷವಾಗಿ 10 ಸಾವಿರ ಮಂದಿಗೆ ಕೆಲಸ ಸಿಗಲಿದೆ' ಎಂದು ತಿಳಿಸಿದರು.

'ಈ ವರ್ಷದ ಆಗಸ್ಟ್ ವೇಳೆಗೆ 500 ಮೆಗಾವಾಟ್ ವಿದ್ಯುತ್ ಉತ್ಪಾದನೆ ಪ್ರಾರಂಭವಾಗಲಿದೆ. ಪ್ರತಿ ಯೂನಿಟ್ ವಿದ್ಯುತ್ತನ್ನು ವಿದ್ಯುತ್ ಕಂಪೆನಿಗೆ ₹ 4.40 ಪೈಸೆಗೆ ಮಾರಾಟ ಮಾಡಲು ಒಪ್ಪಂದ ಮಾಡಿಕೊಳ್ಳಲಾಗಿದೆ' ಎಂದರು.

'ಸೌರ ವಿದ್ಯುತ್ ಪಾರ್ಕ್ ಪಕ್ಕದಲ್ಲಿಯೇ ಆಂಧ್ರಪ್ರದೇಶ ಗಡಿ ಇದೆ. ಅಲ್ಲಿ ಪವನ ವಿದ್ಯುತ್ ಯೋಜನೆ ಕೈಗೊಳ್ಳಲಾಗಿದೆ. ನಮ್ಮ ಸರ್ಕಾರವೂ ಕೂಡ ಇಲ್ಲಿ ಪವನ ವಿದ್ಯುತ್ ಉತ್ಪಾದನೆಗೆ ಚಿಂತನೆ ನಡೆಸಿದೆ' ಎಂದು ಹೇಳಿದರು.

## 'ನಿರಂತರ ವಿದ್ಯುತ್ ರೈತರಿಗೇ ಬೇಡ'

'ಕೃಷಿ ಪಂಪ್‌ಸೆಟ್‌ಗಳಿಗೆ ನಿರಂತರ ವಿದ್ಯುತ್ ಪೂರೈಕೆಗೆ ಸರ್ಕಾರ ಸಿದ್ಧವಿದೆ. ಆದರೆ, ರೈತರೇ ಈ ರೀತಿ ವಿದ್ಯುತ್ ಪೂರೈಕೆ ಬೇಡ ಎನ್ನುತ್ತಿದ್ದಾರೆ' ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

'ನಿರಂತರ ಪೂರೈಸಿದರೆ ಕೊಳವೆ ಬಾವಿಯಲ್ಲಿನ ಅಂತರ್ಜಲ ಪ್ರಮಾಣ ಕಡಿಮೆ ಆಗುತ್ತದೆ. ನೀರಿಲ್ಲದೇ ಪಂಪ್‌ಗಳು ತಿರುಗುತ್ತವೆ. ತಾಂತ್ರಿಕ ಅಡಚಣೆಗಳಾಗುತ್ತವೆ ಎಂಬುದು ಕೆಲವು ರೈತರ ವಾದವಾಗಿದೆ. ಕೆಲ ಶಾಸಕರೂ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಹೀಗಾಗಿ, ಹಗಲು ನಾಲ್ಕು ತಾಸು, ರಾತ್ರಿ 3 ತಾಸು ಸೇರಿ ಒಟ್ಟು 7 ತಾಸು ವಿದ್ಯುತ್ ಪೂರೈಸಲಾಗುತ್ತಿದೆ' ಎಂದು ತಿಳಿಸಿದರು.

ವಿಜಯ ಕರ್ನಾಟಕ

# ಬೆಂಗಳೂರಿಗೆ ಪಾವಗಡದಿಂದ ವಿದ್ಯುತ್: ಸಚಿವ ಡಿಕೆಶಿ

■ **ವಿಕ ಸುದ್ದಿಲೋಕ** ಪಾವಗಡ/ತುಮಕೂರು



ಪಾವಗಡ ಸೋಲಾರ್ ಪಾರ್ಕ್‌ನಿಂದ ಮುಂದಿನ ಚುನಾವಣೆಗೂ ಮುನ್ನ ಬೆಂಗಳೂರಿಗೆ ವಿದ್ಯುತ್ ಪೂರೈಕೆ ಮಾಡಲಾಗುವುದು ಎಂದು ಇಂಧನ ಸಚಿವ ಡಿ.ಕೆ. ಶಿವಕುಮಾರ್ ತಿಳಿಸಿದರು.

ಪಾವಗಡ ತಾಲೂಕಿನ ನಾಗಲಮಡಿಕೆ ಹೋಬಳಿಯ ಐದು ಹಳ್ಳಿಗಳಲ್ಲಿ ನಿರ್ಮಾಣ ಹಂತದಲ್ಲಿರುವ ಏಷ್ಯಾದ ಅತಿ ದೊಡ್ಡ ಸೋಲಾರ್ ಪಾರ್ಕ್ ಕಾಮಗಾರಿಯನ್ನು ಬುಧವಾರ ಪರಿಶೀಲಿಸಿದ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

''ಹದಿಮೂರು ಸಾವಿರ ಎಕರೆ ಪ್ರದೇಶದಲ್ಲಿ ನಿರ್ಮಿಸಿರುವ ಪಾರ್ಕಿಗೆ ಹದಿನೈದುಸಾವಿರ ಕೋಟಿ ರೂಪಾಯಿ ವೆಚ್ಚವಾಗುತ್ತಿದೆ,'' ಎಂದರು.

''ಸೋಲಾರ್ ಪಾರ್ಕ್ ನಿರ್ಮಾಣಕ್ಕೆ ರೈತರಿಂದ ಭೂಮಿ ಖರೀದಿಸಿಲ್ಲ, ಭೂ ಸ್ವಾಧೀನಪಡಿಸಿಕೊಂಡಿಲ್ಲ, ಪ್ರತಿ ಎಕರೆಗೆ 21 ಸಾವಿರ ರೂ. ನಂತೆ 30 ವರ್ಷಕ್ಕೆ ಲೀಸ್‌ಗೆ ಪಡೆಯಲಾಗಿದೆ. ಇಲ್ಲಿ ಇದೇ ಜುಲೈ ಅಥವಾ ಆಗಸ್ಟ್‌ವೇಳೆಗೆ ಮೊದಲ ಹಂತದಲ್ಲಿ 500 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲಾಗುತ್ತದೆ. ಪಾವಗಡ ಅಲ್ಲದೆ ಚಳ್ಳಕೆರೆ, ಹಿರಿಯೂರು, ಮುಧೋಳ್ ತಾಲೂಕುಗಳಲ್ಲಿ ಸೌರವಿದ್ಯುತ್ ಉತ್ಪಾದನೆ ಯೋಜನೆ ಕೈಗೆತ್ತಿಕೊಳ್ಳಲಾಗಿದೆ. ಇನ್ನು ಮುಂದೆ ಪ್ರತೀ ತಾಲೂಕಿನಲ್ಲಿ 1 ಸಾವಿರ ಎಕರೆಯಲ್ಲಿ 200 ಮೆಗಾವ್ಯಾಟ್ ನಷ್ಟು ಸೌರವಿದ್ಯುತ್ ಉತ್ಪಾದನೆಗೆ ಮಾತ್ರ ಅವಕಾಶ ಕಲ್ಪಿಸಲಾಗುತ್ತದೆ. ಖಾಸಗಿಯವರಿಗೆ ರೈತರು ಸೋಲಾರ್ ಪಾರ್ಕ್ ನಿರ್ಮಾಣಕ್ಕೆ ಜಮೀನು ನೀಡುವುದು ಬೇಡ,'' ಎಂದರು.

## ಈ ವರ್ಷ ರಾಜ್ಯದಲ್ಲಿ ಲೋಡ್ ಶೆಡ್ಡಿಂಗ್ ಇಲ್ಲ

**ರಾಜ್ಯದಲ್ಲಿ 9300 ಮೆಗಾವ್ಯಾಟ್ ವಿದ್ಯುತ್ ಬೇಡಿಕೆಯಿದ್ದು, 10 ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲಾಗುತ್ತಿದೆ. ಹೊರರಾಜ್ಯಗಳಿಂದ ವಿದ್ಯುತ್ ಪಡೆಯುವ ಅಗತ್ಯವಿಲ್ಲ. ಈ ಬಾರಿ ಲೋಡ್ ಶೆಡ್ಡಿಂಗ್ ಸಮಸ್ಯೆ ಇರುವುದಿಲ್ಲಎಂದು ಸಚಿವ ಡಿ.ಕೆ ಶಿವಕುಮಾರ್ ಭರವಸೆ ನೀಡಿದರು.**

# ಪಾವಗಡದಲ್ಲಿ ಸೆಪ್ಟೆಂಬರ್‌ನಿಂದ ವಿದ್ಯುತ್ ಉತ್ಪಾದನೆ

## ■ ಸಚಿವ ಡಿಕೆಶಿಯಿಂದ ಕಾಮಗಾರಿ ಪರಿಶೀಲನೆ ■ 2018ರ ಸೆಪ್ಟೆಂಬರ್ ವೇಳೆಗೆ ಉಳಿದ ಸಾವಿರ ಮೆ.ವ್ಯಾ.ಸೇರ್ಪಡೆ

■ ವಿಜಯಕುಮಾರ್ ಚಂದರಗಿ

**ಪಾವಗಡ:** ಬಹುನಿರೀಕ್ಷಿತ ವಿಶ್ವದ ಅತಿದೊಡ್ಡ ಸೋಲಾರ್ ಪಾರ್ಕ್‌ನಲ್ಲಿ ಬರುವ ಸೆಪ್ಟೆಂಬರ್‌ನಿಂದ ಸೌರ ವಿದ್ಯುತ್ ಉತ್ಪಾದನೆ ಆರಂಭಗೊಳ್ಳಲಿದೆ.

12 ಸಾವಿರ ಎಕರೆ ಪ್ರದೇಶದಲ್ಲಿ ಹರಡಿಕೊಂಡಿರುವ ಎರಡು ಸಾವಿರ ಮೆಗಾವ್ಯಾಟ್ ಸಾಮರ್ಥ್ಯದ ಈ ಸೋಲಾರ್ ಪಾರ್ಕ್‌ನಲ್ಲಿ ಎರಡು ಹಂತಗಳಲ್ಲಿ ವಿದ್ಯುತ್ ಉತ್ಪಾದನೆ ಆಗಲಿದ್ದು, ಈ ಪೈಕಿ ಸೆಪ್ಟೆಂಬರ್ ಒಳಗೆ ಸಾವಿರ ಮೆಗಾವ್ಯಾಟ್ ರಾಜ್ಯದ ವಿದ್ಯುತ್ ಜಾಲಕ್ಕೆ ಸೇರ್ಪಡೆಗೊಳ್ಳಲಿದೆ. ಎರಡನೇ ಹಂತದಲ್ಲಿ ಉಳಿದ ಸಾವಿರ ಮೆಗಾವ್ಯಾಟ್ ಬರಲಿದೆ.

ಇಂಧನ ಸಚಿವ ಡಿ.ಕೆ. ಶಿವಕುಮಾರ್ ಬುಧವಾರ ಪಾವಗಡ ಸೋಲಾರ್ ಪಾರ್ಕ್‌ನ ಕಾಮಗಾರಿ ಪರಿಶೀಲನೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಮಾಹಿತಿ ನೀಡಿದರು. ವಿದ್ಯುತ್ ಉತ್ಪಾದನೆ ಸಂಬಂಧದ ಎಲ್ಲ ಸಿದ್ಧತೆಗಳು ನಡೆದಿವೆ. ಪಾರ್ಕ್‌ನಲ್ಲಿ ಉತ್ಪಾದನೆಯಾಗುವ ವಿದ್ಯುತ್ತನ್ನು ಪ್ರಸರಣ ಜಾಲಕ್ಕೆ ಸೇರ್ಪಡೆಗೊಳಿಸಲು ಪವರ್ ಗ್ರಿಡ್ ಕಾರ್ಪೋರೇಷನ್ ಲಿ., (ಪಿಜಿಸಿಐಎಲ್) ಸುಮಾರು 810 ಕೋಟಿ ರೂ. ವೆಚ್ಚದಲ್ಲಿ ಮಾರ್ಗಗಳ ನಿರ್ಮಾಣ ಕಾರ್ಯ ಕೈಗೆತ್ತಿಕೊಂಡಿದೆ ಎಂದು ಹೇಳಿದರು.

ಇದಕ್ಕೆ ಪೂರಕವಾಗಿ 825 ಕೋಟಿ ರೂ.ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ, ಬೀದಿ ದೀಪ ಸೇರಿದಂತೆ ಮತ್ತಿತರ ಮೂಲಸೌಕರ್ಯಗಳನ್ನು ಕಲ್ಪಿಸಲಾಗುತ್ತಿದೆ. ಬರುವ ವಿಧಾನಸಭಾ ಚುನಾವಣೆಯೊಳಗೆ ಇಲ್ಲಿಂದ ರಾಜ್ಯಕ್ಕೆ ವಿದ್ಯುತ್ ಪೂರೈಕೆಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ರಾಜ್ಯ ವಿದ್ಯುತ್ ಅಭಾವ ಎದುರಿಸುತ್ತಿರುವ ಸಂದರ್ಭದಲ್ಲಿ ವಿದ್ಯುತ್ ಸರಬರಾಜು ಕಂಪನಿ (ಎಸ್ಕಾಂ)ಗಳಿಗೆ ಈ ಸೌರ ವಿದ್ಯುತ್ ಉತ್ಪಾದನೆಯು ಶೇ.90ರಷ್ಟು ಅಂದರೆ 1,800 ಮೆ.ವಾ.ವಿದ್ಯುತ್ತನ್ನು ಬಂಡಲ್ಡ್ (ಎಲ್ಲ ಮೂಲಗಳಿಂದ ಪಡೆಯುವ ವಿದ್ಯುತ್) ದರದಲ್ಲಿ ಪ್ರತಿ ಯೂನಿಟ್‌ಗೆ 3.50ರಿಂದ 4.50 ರೂ.ದರದಲ್ಲಿ ಪೂರೈಕೆ ಆಗಲಿದೆ. ಅಲ್ಲದೆ, ಯೋಜನೆ ಅನುಷ್ಠಾನದಿಂದ ಸ್ಥಳೀಯರಿಗೆ ಉದ್ಯೋಗ ಕೂಡ ದೊರೆಯಲಿದೆ ಎಂದು ಹೇಳಿದರು.

**ವರ್ಷಕ್ಕೆ ರೈತರಿಗೆ 21 ಸಾವಿರ ರೂ.:** 12 ಸಾವಿರ ಎಕರೆ ಭೂಮಿಯನ್ನು ಪಾವಗಡ ತಾಲೂಕಿನ ನಾಗಲಮಡಿಕೆ ಹೋಬಳಿಯ ರಾಯಚೆರ್ಲು, ಬಲಸಮುದ್ರ, ತಿರುಮಣಿ, ಕ್ಯಾತಗಾನಚೆರ್ಲು ಮತ್ತು ವಳ್ಳೂರು ವ್ಯಾಪ್ತಿಯಲ್ಲಿ ರೈತರಿಂದ 28 ವರ್ಷ ಗುತ್ತಿಗೆ ರೂಪದಲ್ಲಿ ಪಡೆಯಲಾಗಿದೆ. ಇದಕ್ಕೆ ಪ್ರತಿಯಾಗಿ ರೈತರಿಗೆ ಎಕರೆಗೆ ಪ್ರತಿ ವರ್ಷ 21 ಸಾವಿರ ರೂ. ಪಾವತಿಸಲಾಗುವುದು. ಎರಡು ವರ್ಷಕ್ಕೊಮ್ಮೆ ಈ ಮೊತ್ತವನ್ನು ಶೇ.5ರಷ್ಟು ಹೆಚ್ಚಿಸಲಾಗುವುದು. ಹಾಗಾಗಿ, ಭೂಸ್ವಾಧೀನದ ಪ್ರಶ್ನೆಯೇ ಬರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಬಳ್ಳಾರಿ, ಕಲಬುರಗಿಯಲ್ಲಿ ಸೋಲಾರ್ ಪಾರ್ಕ್ ಸ್ಥಾಪಿಸಲು ಬೇಡಿಕೆ ಇತ್ತು. ಸರ್ಕಾರಿ ಜಮೀನು ಕೂಡ ಲಭ್ಯವಿತ್ತು. ಆದರೆ, ಕಳೆದ 60 ವರ್ಷಗಳಲ್ಲಿ 50 ವರ್ಷ ಪಾವಗಡ ಬರಪೀಡಿತ ಎಂದು ಘೋಷಿಸಲ್ಪಟ್ಟಿದೆ. ಪ್ರತಿ ವರ್ಷ ಇಲ್ಲಿಂದ 8ರಿಂದ 10 ಸಾವಿರ ಜನ ಬೆಂಗಳೂರಿಗೆ ವಲಸೆ ಹೋಗುತ್ತಾರೆ. ಈ ಹಿನ್ನೆಲೆಯಲ್ಲಿ ಈ ಪ್ರದೇಶವನ್ನು ಆಯ್ಕೆ ಮಾಡಲಾಗಿದೆ ಎಂದು ಸಮರ್ಥನೆ ನೀಡಿದರು.



ಪಾವಗಡದಲ್ಲಿ ಸೋಲಾರ್ ಪಾರ್ಕ್ ಕಾಮಗಾರಿ ವೀಕ್ಷಿಸಿದ ಸಚಿವ ಡಿ.ಕೆ.ಶಿವಕುಮಾರ್

### ಪವನ ವಿದ್ಯುತ್ ಉತ್ಪಾದನೆಗೂ ಸರ್ಕಾರ ಚಿಂತನೆ

ಅಲ್ಟ್ರಾ ಮೆಗಾ ಸೋಲಾರ್ ಪವರ್ ಪಾರ್ಕ್‌ನಲ್ಲಿ ಸೌರ ವಿದ್ಯುತ್ ಜತೆಗೆ ಪವನ ವಿದ್ಯುತ್ ಉತ್ಪಾದನೆಗೂ ಸರ್ಕಾರ ಚಿಂತನೆ ನಡೆಸಿದೆ. ಪಾವಗಡದ ತಿರುಮಣಿ ಗ್ರಾಮದಲ್ಲಿರುವ ಸೌರವಿದ್ಯುತ್ ಘಟಕದಿಂದ ಅನತಿ ದೂರದಲ್ಲಿ ಆಂಧ್ರಪ್ರದೇಶ ಗಡಿ ಇದ್ದು, ಅಲ್ಲಿ ಸೌರವಿದ್ಯುತ್ ಜತೆಗೆ ಪವನ ವಿದ್ಯುತ್ ಉತ್ಪಾದನೆಗೂ ಸಿದ್ಧತೆ ಮಾಡಿಕೊಳ್ಳಲಾಗಿದೆ. ಸೋಲಾರ್ ಪಾರ್ಕ್‌ನಲ್ಲೂ ಈ ಸಾಧ್ಯಾಸಾಧ್ಯತೆಗಳ ಬಗ್ಗೆ ಕರ್ನಾಟಕ ನವೀಕರಿಸಬಹುದಾದ ಇಂಧನ ನಿಯಮಿತ (ಕೆಆರ್‌ಇಡಿಎಲ್) ಪರಿಶೀಲನೆ ನಡೆಸಿದೆ. ಇದು ಸಾಕಾರಗೊಂಡರೆ, ಎರಡೂ ಮೂಲಗಳ ವಿದ್ಯುತ್ತನ್ನು ಒಂದೇ ಪ್ರಸರಣ ಮಾರ್ಗದಲ್ಲಿ ಸರಬರಾಜು ಮಾಡಲು ಸಾಧ್ಯವಾಗುತ್ತದೆ. ಇದರಿಂದ ವೆಚ್ಚವೂ ಕಡಿಮೆಯಾಗುತ್ತದೆ ಎಂಬುದು ಕೆಆರ್‌ಇಡಿಎಲ್ ಲೆಕ್ಕಾಚಾರ. ಈ ಭಾಗದಲ್ಲಿ ಗುಡ್ಡಗಾಡು ಪ್ರದೇಶವಿದ್ದು, ಇದಕ್ಕೆ ಪೂರಕವಾಗಿ ಅಲ್ಲಿನ ಕೆಲ ರೈತರು ಜಮೀನು ನೀಡಲು ಮುಂದೆ ಬಂದಿದ್ದಾರೆ. ಯಾವ ವೇಗದಲ್ಲಿ ಗಾಳಿ ಬೀಸುತ್ತದೆ? ಸೌರ ವಿದ್ಯುತ್ ಪ್ಯಾನೆಲ್‌ಗಳ ಮೇಲೆ ಪವನ ವಿದ್ಯುತ್‌ನ ಫ್ಯಾನ್‌ಗಳ ನೆರಳು ಬೀಳದಂತೆ ಮಾಡಲು ಸಾಧ್ಯವೇ? ಎನ್ನುವುದು ಸೇರಿದಂತೆ ಹಲವು ಅಂಶಗಳನ್ನು ಪರಿಶೀಲಿಸಬೇಕಿದೆ ಎಂದು ಕೆಆರ್‌ಇಡಿಎಲ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು. ಈ ಬಗ್ಗೆ ಪ್ರತಿಕ್ರಿಯಿಸಿದ ಡಿ.ಕೆ.ಶಿವಕುಮಾರ್, 'ಸೋಲಾರ್ ಪಾರ್ಕ್‌ನಲ್ಲಿ ಪವನ ವಿದ್ಯುತ್ ಉತ್ಪಾದನೆಗೆ ಸಂಬಂಧಿಸಿದಂತೆ ತಾಂತ್ರಿಕ ಸಾಧ್ಯಾಸಾಧ್ಯತೆಗಳ ಕುರಿತು ಅಧ್ಯಯನ ನಡೆಸಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ವರದಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದರು.

D. H. . N. C.

# Solar park: generation of power from August

## Energy Minister inspects project site in Pavagad taluk

Bosky khanna

**PAVAGAD: Energy Minister D K Shivakumar on Wednesday said the solar park in Pavagad taluk of Tumakuru district will begin to generate 600 MW of power by August.**

It will be the first project in India where the government will not be acquiring land, but is entering into a lease agreement with farmers to generate solar energy, he told reporters here.

Shivakumar visited the solar power park project site on Wednesday with MLC V S Ugrappa and MLA Thimmarayappa and interacted with farmers. Five villages in the taluk-Balasamudra, Thirumani, Kyataganacharlu, Valley and Rayacharlu-have been identified to set up the solar park. He said generation of 1,000 MW of electricity will be started by September and by the end of September 2018, another 1,000 MW of power will be supplied.

He said, "We had proposals from Belagavi, Kalaburagi and Raichur where people were ready to give us land at whatever price we quoted. But we have selected Pavagad. The government is also planning to set up industries here and generate employment here so that farmers do not have to go to Bengaluru or any other districts." He said that the total cost of the project is Rs 10,000 crore and the government is expecting a return of Rs 10,500 crore from it.

Shivakumar said the government is planning to acquire 13,000 acres of land to set up the 2,700 MW solar park, where 2,000 MW will be generated by the state and the Union government and 700 MW by private companies. Discussions have been held with farmers and they have agreed to part with land at a lease rent of Rs 21,000 per acre, with 5% enhancement every year up to 20 years. Later, the farmers can decide on continuing the contract, he said.

He said that the total investment for the project is huge and requested the farmers to cooperate with the government in this regard.

The bundled power (a combination of solar and wind) will be procured by the Energy Department at a cost of Rs 3.30 per unit, while the power suppliers will ensure recovering it from sources at a cost of Rs 4.50 per unit. The power generated will be fed to the Central and the state grid, Shivakumar added.

DH News Service



Energy Minister D K Shivakumar looks at the blue print of solar park near Thirumani in Pavagad taluk in Tumakuru district on Wednesday. DH PHOTO

### 'Keep nuts and bolts aside'

Urging the farmers to maintain peace and not stop the solar park work, Energy Minister D K Shivakumar said that he has issued directions to the officials to continue the work. "You keep the nuts and bolts (agitating farmers and land losers) aside and continue the project," he said. He explained to the farmers that the reputation and finances of the state government are at stake, if the project is delayed. He said that the whole agriculture sector is facing losses. The farmers should not just depend on this and if they are so attached, they can come to his agricultural land of 100 acres and work free of cost and take all the earnings with them, he added.

## Farmers air grievances to minister

**PAVAGAD:** Several farmers interacted with Energy Minister D K Shivakumar when he visited the taluk to inspect the solar park work on Wednesday.

Some farmers said their land is not dry, but fertile. C Narayan, a farmer, said that his land is fertile and it is their only source of livelihood.

"The land has borewells and we are growing cash and vegetable crops," the farmer added. Some others said their land is gomala which is set to be acquired for the project. "If the land is taken away, then our cattle and family will have nowhere to go," they expressed apprehensions.

Hearing the appeals of the farmers, Shivakumar said that he will direct officials of revenue, agriculture and horticulture departments to conduct a survey in the region again and prepare a report. Later, the farmers and their representatives will be called to Vidhana Soudha to discuss the issue, he added.

He tried to assure the farmers that their land is not being taken away by private companies, but by the government.

Chennakeshwara D P, president of farmers' association of Vallur, said, "The government officials conducted a survey and took all our land documents. But they have excluded us from the project."

Another farmer accused the officials of demanding a bribe of Rs 5,000 to include his land in the project.

DH News Service

Deccan Chronicle

"The biggest solar park will start functioning in August this year



— **D.K. Shivakumar**
**Energy Minister**

# Solar park: generation of power from August

## Energy Minister inspects project site in Pavagad taluk

Bosky khanna

**PAVAGAD: Energy Minister D K Shivakumar on Wednesday said the solar park in Pavagad taluk of Tumakuru district will begin to generate 600 MW of power by August.**

It will be the first project in India where the government will not be acquiring land, but is entering into a lease agreement with farmers to generate solar energy, he told reporters here.

Shivakumar visited the solar power park project site on Wednesday with MLC V S Ugrappa and MLA Thimmarayappa and interacted with farmers. Five villages in the taluk-Balasamudra, Thirumani, Kyataganacharlu, Valley and Rayacharlu-have been identified to set up the solar park. He said generation of 1,000 MW of electricity will be started by September and by the end of September 2018, another 1,000 MW of power will be supplied.



Energy Minister D K Shivakumar looks at the blue print of solar park near Thirumani in Pavagad taluk in Tumakuru district on Wednesday. DH PHOTO

He said, "We had proposals from Belagavi, Kalaburagi and Raichur where people were ready to give us land at whatever price we quoted. But we have selected Pavagad. The government is also planning to set up industries here and generate employment here so that farmers do not have to go to Bengaluru or any other districts." He said that the total cost of the project is Rs 10,000 crore and the government is expecting a return of Rs 10,500 crore from it.

Shivakumar said the government is planning to acquire 13,000 acres of land to set up the 2,700 MW solar park, where 2,000 MW will be generated by the state and the Union government and 700 MW by private companies. Discussions have been held with farmers and they have agreed to part with land at a lease rent of Rs 21,000 per acre, with 5% enhancement every year up to 20 years. Later, the farmers can decide on continuing the contract, he said.

He said that the total investment for the project is huge and requested the farmers to cooperate with the government in this regard.

The bundled power (a combination of solar and wind) will be procured by the Energy Department at a cost of Rs 3.30 per unit, while the power supplier will ensure recovering it fron sources at a cost of Rs 4.50 pe unit. The power generated wi be fed to the Central and th state grid, Shivakumar added.

**DH News Service**

### 'Keep nuts and bolts aside'

Urging the farmers to maintain peace and not stop the solar park work, Energy Minister D K Shivakumar said that he has issued directions to the officials to continue the work. "You keep the nuts and bolts (agitating farmers and land losers) aside and continue the project," he said. He explained to the farmers that the reputation and finances of the state government are at stake, if the project is delayed. He said that the whole agriculture sector is facing losses. The farmers should not just depend on this and if they are so attached, they can come to his agricultural land of 100 acres and work free of cost and take all the earnings with them, he added.

# Farmers turn tables on Pavagada's shining model

| Niranjan.Kaggere
@timesgroup.com
TWEETS @niranjankMIRROR

**#Pavagada**

Praised by prime minister Narendra Modi, the unique land 'acquisition' process to set up the nation's biggest solar park at Pavagada in Tumakuru district was emulated by other states to avoid legal wrangles that are generally involved in land acquisition processes.

Unlike the regular method of acquiring land from farmers by paying compensation to them, the government chose to obtain the required 12,000 acres on lease for 25 years, while allowing the farmers to retain ownership of the land.

However, half-way through the implementation of the project, the ambitious project is now riddled with land troubles. Spurred by sentiments towards their lands, Pavagada farmers are increasingly refusing to part with their 'full land' for the state's ambitious project.





P MUTHU

Farmers are increasingly refusing to part with their full land for the biggest solar park in the country. (Right) Energy minister DK Shivkumar meets farmers

While the Karnataka Solar Power Development Corporation (KSPDC) has obtained the lease consent from the land owners, farmers' latest decision to retain part of the land has affected the project from continuing smoothly.

A few others' refusal to give 'right of way' for installation of towers or transmission lines has also resulted in bitter clashes among locals and the private company engineers and vendors – which has caused tension in the solar park area.

A farmers' consultation meeting on Wednesday in Pavagada with energy minister DK Shivakumar saw farmers vehemently refusing to give away their complete lands for the project.

The worried minister has directed the assistant commissioner and deputy commissioner of Tumakuru district to assess such extent of land and get farmers to Vidhana Soudha for a possible solution.

Peeved by the incidents of locals assaulting electrical engineers and workers, Shivakumar has warned that the government may have to use police force to prevent such incidents to avoid any setbacks to the state government's ambitious project.

## Our life is linked to the land, don't snatch it completely!

Although the government has only obtained the land for the project on a lease basis while allowing farmers to retain the ownership, the land would completely be altered by the companies while installing panels and towers, leaving no scope for farmers to take up anything in the area for 25 years.

Chinna Raju, a farmer from Rayacharlu village, appealed: "Out of the 100 acres plot, I have given 90 acres for the project. I have no intentions to give another 10 acres where we have buried our parents and grandparents. I have three children to look after and I need that part to support the family as I have nothing to rely on."

Yet another farmer from Balasamudra said, "While I have given over 40 acres for the project, another 10 acres abuts the state highway and the main road. It has more value, and I need it to support my family as the region has been drought-stricken for over six-years." A few others have argued that some patches of land are under irrigation and they do not want to seal their future by handing over everything.

The government's selected acquisition of land has also been slammed by the farmers, who have been pressurising the authorities to 'acquire' their lands, too.

DP Channakeshava, president of the Venkatammanahalli gram panchayat, said, "Our village is the last revenue village of Karnataka. As the area is naxal-infested and suffering from prolonged drought, there is nothing that we can cultivate. During the survey, officials had revealed that they would take over our land too. But during actual acquisition, our lands had been left out for no reason. Why can't the government take over our lands, too?"

A senior official from KSPDC said, "Initially, these farmers demanded Rs 50,000 per acre while the guidance value was Rs 20,000. Hence, they were side-lined and land was acquired where farmers were willing to give as per the government rate." According to DK Shivakumar, the land has been taken on lease for Rs 21,000 per acre per year. "Not a single acre has been acquired, but obtained on lease-rental basis. The annual land lease rent is Rs 21,000 per acre escalated at 5 per cent on the base rate every two years."

Supervising works at different locations of the solar park, Shivakumar said, "We have made an agreement for 600 Mw of power. Out of which, 500 Mw will be commissioned by July-August 2017, in the first phase. The bundled power will be purchased at Rs 3.30 per unit. National Power Grid Corporation (NPGC) has invested Rs 810 crore for setting up evacuation lines and transmission lines to draw power and supply to other parts of the state. This apart, the state government will also be spending Rs 800 crore for setting up eight sub-stations, infrastructure, light and roads in the area."

Bangalore Mirror